ರಾಜ್ಯದಲ್ಲಿ ಅರಣ್ಯ ಅಭಿವೃದ್ಧಿಯಲ್ಲಿ ಗ್ರಾಮ ಅರಣ್ಯ ಸಮಿತಿ

961 (1047) - ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ (ಅಂಕೊಲ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಅರಣ್ಯ ಅಭಿವೃದ್ಧಿ ಯಾವ ಯಾವ ಯೋಜನೆಯಡಿಯಲ್ಲಿ ಎಲ್ಲೆಲ್ಲಿ ಅನುಷ್ಠಾನಗೊಳ್ಳುತ್ತಲಿದೆ, ಇದಕ್ಕೆ ನೀಡಲಾಗುವ ಹಣವೆಷ್ಟು.

ಆ. ಅರಣ್ಯ ಅಭಿವೃದ್ಧಿಯಲ್ಲಿ ಗ್ರಾಮ ಅವಣ್ಯ ಸಮಿತಿಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ. ಇದರ ಬಗ್ಗೆ ಸರ್ಕಾರದ ಮುಂದಿನ ಕ್ರಮಗಳೇನು.

ಶ್ರೀ ಕೆ.ಹೆಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ. ರಾಜ್ಯದಲ್ಲಿ ಅರಣ್ಯ ಅಭಿವೃದ್ಧಿ ಯಾವ ಯಾವ ಯೋಜನೆಯಲ್ಲಿ ಎಲ್ಲೆಲ್ಲಿ ಅನುಷ್ಠಾನಗೊಳ್ಳುತ್ತಲಿದೆ ಹಾಗೂ ಇದಕ್ಕೆ ನೀಡಲಾಗುವ ಹಣವೆಷ್ಟು ಎಂಬ ಮಾಹಿತಿಯನ್ನು ಲಗತ್ತಿಸಿದ ಅನುಬಂಧದಲ್ಲಿ ನೀಡಲಾಗಿದೆ.

ಆ. ಬಂದಿರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಕ್ರ. ಸಂ.	ಯೋಜನೆಗಳ ವಿವರ	ಅಭಿವೃದ್ಧಿ ಕಾರ್ಯಗಳನ್ನು ಎಲ್ಲೆಲ್ಲಿ ಕೈಗೊಳ್ಳಲಾಗುತ್ತಿದೆ (ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುತ್ತಿರುವ ಜಿಲ್ಲೆಗಳ ಹೆಸರು)	ಅನುದಾನ (ಲಕ್ಷ ರೂ.ಗಳಲ್ಲಿ)
1	2	3	4
1.	ಕ್ಷೀಣಿತ ಅರಣ್ಯಗಳ ಅಭಿವೃದ್ಧಿ	ಮಂಡ್ಯ, ಕೊಡಗು, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ, ಉತ್ತರಕನ್ನಡ, ಬಿಜಾಪುರ ಮತ್ತು ಕೊಪ್ಪಳ	70.00
2.	ಪಶ್ಚಿಮಘಟ್ಟಗಳ ಅರಣ್ಯೀಕರಣ	ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ	25.00
3.	ನಗರ ಪ್ರದೇಶಗಳ ಹಸಿರೀಕರಣ	ಬೆಂಗಳೂರು ನಗರ ಮತ್ತು ಮೈಸೂರು	5.00
4.	ರಸ್ತೆ ಬದಿ ನೆಡುತೋಪುಗಳು	ತುಮಕೂರು, ಉಡುಪಿ, ಉತ್ತರ ಕನ್ನಡ ಮತ್ತು ಗದಗ	3.00
5.	ಸಾರ್ವಜನಿಕ ವಿತರಣೆಗಾಗಿ ಸಸಿಗಳನ್ನು ಬೆಳೆಸುವುದು	ಮಡಿಕೇರಿ, ದಕ್ಷಿಣ, ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉಡುಪಿ	3.00
6.	ಕ್ಷೇತ್ರ ಆಧಾರಿತ ಉರುವಲು ಮತ್ತು ಮೇವು ಯೋಜನೆ (ಕೇಂದ್ರ ಪುರಸ್ಕೃತ ಯೋಜನೆ)	ಬೆಂಗಳೂರು ಗ್ರಾಮಾಂತರ, ಕೋಲಾರ, ಮೈಸೂರು, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಧಾರವಾಡ, ಗದಗ, ಹಾವೇರಿ ಬೆಳಗಾಂವೆ, ಬಾಗಲಕೋಟೆ, ಬಿಜಾಪುರ, ಚಿತ್ರದುರ್ಗ, ದಾವಣಗೆರೆ, ಗುಲ್ಬರ್ಗಾ	300.00
7.	ಕಾಂಡ್ಲವನ ಅಭಿವೃದ್ಧಿ	ಉಡುಪಿ ಮತ್ತು ಉತ್ತರ ಕನ್ನಡ	22.03
8.	ಪೂರ್ವಪ್ರಸ್ಥಭೂಮಿಯ ಅರಣ್ಯೀಕರಣ ಮತ್ತು ಪರಿಸರ ಯೋಜನೆ (ವಿದೇಶಿ ನೆರವಿನ ಯೋಜನೆ)	ಈ ಯೋಜನೆಯನ್ನು ಉತ್ತರಕನ್ನಡ, ಉಡುಪಿ, ದಕ್ಷಿಣಕನ್ನಡ ಮತ್ತು ಕೊಡಗು ಜಿಲ್ಲೆಗಳನ್ನು ಹೊರ್ತುಪಡಿಸಿ ರಾಜ್ಯದ ಇತರ ಎಲ್ಲಾ ಜಿಲ್ಲೆಗಳು	11,730.89
9.	ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿ ಯೋಜನೆ	ರಾಜ್ಯದ ಎಲ್ಲಾ ಜಿಲ್ಲೆಗಳು	380.17

1	2	3	4
10.	ಪರಿಹಾರಾತ್ಮಕ ನೆಡುತೋಪು ಯೋಜನೆ	ದಕ್ಷಿಣಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ ಚಿತ್ರದುರ್ಗ, ಬಳ್ಳಾರಿ, ದಾವಣಗೆರೆ, ಬೆಳಗಾಂವೆ, ರಾಯಚೂರು ಮತ್ತು ಉತ್ತರ ಕನ್ನಡ.	159.69
11.	ಪರಿಹಾರಾತ್ಮಕ ಅರಣ್ಯೀಕರಣ ಯೋಜನೆ	ಉಡುಪಿ, ದಕ್ಷಿಣಕನ್ನಡ, ಮಡಿಕೇರಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ತುಮಕೂರು, ಮಂಡ್ಯ, ಮೈಸೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿತ್ರದುರ್ಗ, ಬಳ್ಳಾರಿ, ದಾವಣಗೆರೆ, ಕೊಪ್ಪಳ, ಬೆಳಗಾಂ ಧಾರವಾಡ, ಗುಲ್ಬರ್ಗಾ ಮತ್ತು ಬೀದರ್.	31.22